**ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ. ಎಂ. ಎಫ್.ಸಿ., ನ್ಯಾಯಾಲಯ ಚನ್ನಪಟ್ಟಣ ಚನ್ನಪಟ್ಟಣ.**

**ಸಿ.ಸಿ. ಸಂಖ್ಯೆ:339/2024**

ಚಾಸಾಃ 1 ಪ್ರಾಸಾಃ1

| | | |
|---|---|---|
| ಹೆಸರು | : | ಸುರೇಶ್ ಕುಮಟೆ |
| ಗಂಡನ/ತಂದೆಯ ಹೆಸರು | : | ಗಿರೀಶ್ |
| ವಯಸ್ಸು | : | 36 ವರ್ಷ |
| ಉದ್ಯೋಗ | : | ಅಬಕಾರಿ ನಿರೀಕ್ಷಕರು, ಚಾಮರಾಜನಗರ |
| ವಾಸ | : | ಚಾಮರಾಜನಗರ |

**ದಿನಾಂಕ 13.03.2026 ರಂದು ಸಾಕ್ಷಿಯನ್ನು ಕರೆಸಲಾಯಿತು. ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ: ಮಾನ್ಯ ಎಪಿಪಿ ಯವರಿಂದ:**

ನಾನು 28.06.2019 ರಿಂದ 26.12.2023 ರವರೆಗೆ ಅಬಕಾರಿ ಉಪ ನಿರೀಕ್ಷಕರಾಗಿ ಚನ್ನಪಟ್ಟಣ ವಲಯದಲ್ಲಿ ಕರ್ತವ್ಯ ನಿರ್ವಹಿಸಿದ್ದೇನೆ

ದಿನಾಂಕ 29.08.2023 ರಂದು ಸಂಜೆ 6.45 ಗಂಟೆಯ ಸಮಯದಲ್ಲಿ ಮಳೂರು ಹೋಬಳಿ ಮಾಕಳಿ ಗ್ರಾಮದಲ್ಲಿ ಇಲಾಖಾ ಸಿಬ್ಬಂದಿಯ ಜೊತೆ ಚಾಸಾ - 4 ರಿಂದ 6 ರವರ ಜೊತೆ ಇಲಾಖಾ ವಾಹನ ಸಂಖ್ಯೆಯಾದ ಕೆ ಎ 42-ಜಿ 1026 ಅಲ್ಲಿ ಗಸ್ತು ನಡೆಸುತ್ತಿದ್ದ ಸಮಯದಲ್ಲಿ ಮಾಕಳಿ ಗ್ರಾಮದ ಭಾಗ್ಯಮ್ಮ ಅಲಿಯಾಸ್ ಗೌರಮ್ಮ ಕೋಂ ಪುಟ್ಟಸ್ವಾಮಿಗೌಡರವರ ಮನೆಯಲ್ಲಿ ಅಕ್ರಮವಾಗಿ ಮದ್ಯವನ್ನು ದಾಸ್ತಾನು ಮಾಡಿ ಅಕ್ರಮವಾಗಿ ಸಾರ್ವಜನಿಕರಿಗೆ ಮದ್ಯ ಮಾರಾಟ ಮಾಡುತ್ತಿದ್ದಾರೆಂದು ಮಾಹಿತಿ ಬಂದ ಮೇರೆಗೆ ಯಾಥಾ ಪ್ರಕಾರ ಮಾಹಿತಿಯನ್ನು ದಾಖಲಿಸಿಕೊಂಡು ಅಲ್ಲೇ ಇದ್ದ ಸ್ಥಳೀಯರನ್ನು ಕೋರಿಕೊಂಡ ಮೇರೆಗೆ ಚಾಸಾ-2 ಮತ್ತು ಚಾಸಾ-3 ರವರು ನಮ್ಮ ಜೊತೆ ದಾಳಿಗೆ ಪಂಚರಾಗಿ ಬರುವಂತೆ ಸಹಕರಿಸಿ ಎಂದು ಅವರಿಗೆ ನೋಟೀಸ್ ಅನ್ನು ಜಾರಿ ಮಾಡಿ, ಅವರು ಒಪ್ಪಿ ಕೊಂಡು ನೋಟೀಸ್ ಗೆ ಸಹಿ ಮಾಡಿ ನಮ್ಮ ಜೊತೆ ದಾಳಿಗೆ ಬಂದಿರುತ್ತಾರೆ. ನಾನು, ಚಾಸಾ2 ರಿಂದ 6 ರವರು ಸಂಜೆ ಸುಮಾರು 7.00 ಗಂಟೆಯ ಸಮಯದಲ್ಲಿ ಭಾಗ್ಯಮ್ಮ

ಅಲಿಯಾಸ್ ಗೌರಮ್ಮ ಕೋಂ ಪುಟ್ಟಸ್ವಾಮಿಗೌಡರವರ ಮನೆಯ ಹತ್ತಿರ ಹೋದಾಗ ಸಮವಸ್ತ್ರದಲ್ಲಿದ್ದ ನಮ್ಮನ್ನು ನೋಡಿ ಮತ್ತು ಇಲಾಖಾ ವಾಹನವನ್ನು ನೋಡಿ ಒಬ್ಬ ಮಹಿಳೆ ಓಡಿ ಹೋಗಿರುತ್ತಾರೆ. ಆ ದಿನ ರಾತ್ರಿಯಾಗಿದ್ದರಿಂದ ಸಿಬ್ಬಂದಿಯವರು ಹಿಡಿಯಲು ಪ್ರಯತ್ನ ಮಾಡಿದಾಗ ಓಡಿಹೋಗಿರುತ್ತಾರೆ ಸಿಕ್ಕಿರುವುದಿಲ್ಲ. ನಂತರ ತಡ ಮಾಡಿದರೆ ಸದರಿ ವ್ಯಕ್ತಿಯು ಸಾಕ್ಷ್ಯವನ್ನು ನಾಶ ಪಡಿಸಬಹುದೆಂಬ ಕಾರಣದಿಂದ ಅಲ್ಲಿಂದ ಸದರಿ ಕೃತ್ಯ ಸ್ಥಳಕ್ಕೆ ಬಂದು ನ್ಯಾಯಾಲಯದಿಂದ ವಾರೆಂಟ್ ಪಡೆಯಲು ಕಾಲಾವಕಾಶ ಇಲ್ಲದ ಕಾರಣ ಕರ್ನಾಟಕ ಅಬಕಾರಿ ಕಲಂ 54 ರ ರೀತ್ಯಾ ಕಾರಣಗಳನ್ನು ನಮೂದಿಸಿ ಪರಸ್ಪರ ಅಂಗಶೋದನೆ ಮಾಡಿ ದಾಳಿಯನ್ನು ಕೈಗೊಳ್ಳಲಾಯಿತು. ಮನೆಯನ್ನು ಪರಿಶೀಲಿಸಲಾಗಿ ಮನೆಯ ಹಾಲಿನ ಮಂಚದ ಕೆಳಭಾಗದಲ್ಲಿ 3 ರಟ್ಟಿನ ಪೆಟ್ಟಿಗೆಗಳು ಇರುವುದು ಕಂಡು ಬಂದಿರುತ್ತದೆ. ಅವುಗಳನ್ನು ಹೊರ ತೆಗೆದು ನೋಡಲಾಗಿ ಮದ್ಯದ ಟೆಟ್ರಾ ಪ್ಯಾಕೆಟ್ ಗಳು ಕಂಡು ಬಂದಿರತ್ತದೆ. ಸದರಿ ಟೆಟ್ರಾ ಪ್ಯಾಕೆಟ್ ಗಳನ್ನು ಪರಿಶೀಲಿಸಿದಾಗ

1.Haywards cheers whisky 90 ಎಂ ಎಲ್ ನ 190 ಪೌಚ್ ಗಳು

2. Bag piper whisky 180 ಎಂ ಎಲ್ ನ 40 ಪೌಚ್ ಗಳು

ಒಟ್ಟು 24.300 ಲೀಟರ್ ಭಾರತೀಯ ತಯಾರಿಕಾ ಮದ್ಯವನ್ನು ಅಕ್ರಮವಾಗಿ ಹೊಂದಿರುವುದು ಕಂಡು ಬಂದಿರುತ್ತದೆ.

ಯಾವುದೇ ಪರವಾನಿಗೆ ಇಲ್ಲದೆ ಇಷ್ಟು ಮದ್ಯಗಳನ್ನು ಹೊಂದಿರುವ ಕರ್ನಾಟಕ ಅಬಕಾರಿ ಕಾಯಿದೆ ಅನ್ವಯ ಶಿಕ್ಷಾರ್ಹ ಅಪರಾದವಾಗಿದ್ದರಿಂದ ಅವರ ವಿರುದ್ದ ಕ್ರಮ ಕೈಗೊಳ್ಳಲು ಅಲ್ಲೇ ಇದ್ದ ಪಂಚರನ್ನು ಮನೆಯ ಮಾಲೀಕರು ಯಾರು ಅವರ ಹೆಸರು, ವಿಳಾಸವನ್ನು ವಿಚಾರ ಮಾಡಲಾಗಿ ಅವರ ಹೆಸರು ಭಾಗ್ಯಮ್ಮ ಅಲಿಯಾಸ್ ಗೌರಮ್ಮ ಕೋಂ ಪುಟ್ಟಸ್ವಾಮಿಗೌಡ, 50 ವರ್ಷ, ಚಿಲ್ಲರೆ ಅಂಗಡಿ ವ್ಯಾಪಾರ, ಮಾಕಳಿ ಗ್ರಾಮ ಎಂದು ತಿಳಿಸಿರುತ್ತಾರೆ. ಪಂಚರ ಸಮಕ್ಷಮ ಮಹಜರ್ ಕ್ರಮವನ್ನು ಕೈಗೊಂಡಿರುತ್ತೇವೆ. ಮದ್ಯಗಳನ್ನು ವಶಕ್ಕೆ ಪಡೆದು ಅವುಗಳ ಪೈಕಿ 90 ಮಿಲಿಯ Haywards cheers whisky 20 ಟೆಟ್ರಾ ಪ್ಯಾಕೆಟ್ ಗಳು, 180 ಎಂ ಎಲ್ ನ Bag piper whisky ಯ 5 ಟೆಟ್ರಾ ಪ್ಯಾಕೆಟ್ ಗಳನ್ನು ರಾಸಾಯನಿಕ ವಿಶ್ಲೇಷಣೆಗೆ ಮಾದರಿ ತೆಗೆದು ಬಿಳಿಯ ಬಟ್ಟೆಯಿಂದ ಸುತ್ತಿದಾರವನ್ನು

ಕಟ್ಟಿ, ಅರಗು ಹಚ್ಚಿ ಇಲಾಖಾ ಸೀಲು ನಮೂದಿಸಿ ಸೀಲು ಮಾಡಲಾಯಿತು. ಪ್ರಕರಣದ ವಿವರವನ್ನು ಬರೆದ ಚೀಟಿಗಳನ್ನು ಇವುಗಳಿಗೆ ಅಂಟಿಸಲಾಯಿತು. ಅವುಗಳನ್ನು ವಶಕ್ಕೆ ಪಡೆದುಕೊಂಡಿರುತ್ತೇವೆ. ಉಳಿದ ಮದ್ಯವನ್ನು ಅದೇ ರಟ್ಟಿನ ಬಾಕ್ಸ್ ನಲ್ಲಿ ಹಾಕಿರುತ್ತೇವೆ. ಮಹಜರ್ ಕ್ರಮವನ್ನು ಸಂಜೆ 7.00-8.30 ಗಂಟೆಯವರೆಗೆ ಜರುಗಿಸಿರುತ್ತೇನೆ. ಅಮಾನತ್ತು ಪಡಿಸಿಕೊಂಡ ಮದ್ಯಗಳನ್ನು ಠಾಣೆಗೆ ವಾಪಸ್ಸು ತೆಗೆದುಕೊಂಡು ಬಂದು ಠಾಣೆಯಲ್ಲಿ ನಿವೇದನೆಯನ್ನು ತಯಾರು ಮಾಡಿಕೊಂಡು, ಪ್ರಕರಣದ ಸಂಖ್ಯೆ 11/2023-2024 ರಂತೆ ಮೊಕದ್ದಮ್ಮೆ ದಾಖಲಿಸಿರುತ್ತೇವೆ. ಪ್ರಥಮ ವರ್ತಮಾನ ವರದಿಯನ್ನು ಮತ್ತು ಇತರ ದಾಖಲಾತಿಗಳನ್ನು ನ್ಯಾಯಾಲಯಕ್ಕೂ ಮತ್ತು ಮೇಲಾಧಿಕಾರಿಗಳಲ್ಲಿ ನಿವೇದಿಸಿಕೊಳ್ಳಲಾಯಿತು. ಪ್ರಕರಣದ ಮುಂದಿನ ತನಿಖೆಯನ್ನು ಚಾಸಾ8 ರವರಿಗೆ ದಿಃ01.09.2023 ರಂದು ಕಡತವನ್ನು ವರ್ಗಾವಣೆ ಮಾಡಿರುತ್ತೇನೆ. ದಿಃ11.12.2023 ರಂದು ತನಿಖಾಧಿಕಾರಿಯವರ ಮುಂದೆ ಹಾಜರಾಗಿ ಪ್ರಕರಣದ ಹೇಳಿಕೆಯನ್ನು ನೀಡಿರುತ್ತೇನೆ.

ಆ ದಿನ ಕೈಗೊಂಡ ಮಹಜರ್ ಅನ್ನು ನೋಡಿ ಗುರುತಿಸುತ್ತೇನೆ. ಸದರಿ ಮಹಜರನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-1 ಎಂದು ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ಆ ದಿನ ನಾನು ತಯಾರಿಸಿದ ಶೋದನಾ ವಾರೆಂಟ್ ಅನ್ನು ನೋಡಿ ಗುರುತಿಸುತ್ತೇನೆ. ಸಾಕ್ಷಿಯು ಶೋದನಾ ವಾರೆಂಟನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-2 ಎಂದು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-2 (ಎ) ಎಂದು ಗುರುತಿಸಲಾಯಿತು. ಸರಕಾರದ ತರ್ಪೆ ಫಿರ್ಯಾದಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-3 ಎಂದು ಸಾಕ್ಷಿಯ ಸಹಿಯನ್ನು ನಿಪಿ-3(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ಪ್ರಥಮ ವರ್ತಮಾನ ವರದಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-4 ಎಂದು ಸಾಕ್ಷಿಯ ಸಹಿಯನ್ನು ನಿಪಿ-4(ಎ) ಎಂದು ಗುರುತಿಸಲಾಯಿತು. ದಾಖಲಿಸಿಕೊಂಡ ಮಾಹಿತಿಯನ್ನು ನಿಪಿ-5 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-5(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ಮಾದರಿ ಸೀಲಿನ ನಕಲನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-6 ಎಂದು ಸಾಕ್ಷಿಯ ಸಹಿಯನ್ನು ನಿಪಿ-6(ಎ) ಎಂದು ಗುರುತಿಸಲಾಯಿತು. ಆ ದಿನ ರಾಸಾಯನಿಕ ವಿಶ್ಲೇಷಣೆಗಾಗಿ ತೆಗೆದ ಮದ್ಯದ ಪೌಚ್‌ಗಳನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ 25 ಮದ್ಯದ ಪೌಚ್ ಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಮು ಮಾ 1 ಎಂದು

ಗುರುತಿಸಲಾಯಿತು. ಮದ್ಯದ ಪೌಚ್ ಅನ್ನು ಹೊಂದಿರು ಬಿಳಿ ಬ್ಯಾಗ್ ಮೇಲೆ ಅಂಟಿಸಿರುವ ಚೀಟಿಯ ಮೇಲೆ ಇರುವ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ಮು ಮಾ 1(ಎ) ಎಂದು ಗುರುತಿಸಲಾಯಿತು.

**<u>ಪಾಟೀ ಸವಾಲುಃ ಆರೋಪಿಯ ಪರ ಶ್ರೀ ಹೆಚ್ ಎಸ್ ಕೆ ವಕೀಲರಿಂದಃ</u>**

ನಾವು ಮಾಕಳಿ ಗ್ರಾಮದಲ್ಲಿ ಗಸ್ತು ಕರ್ತವ್ಯಕ್ಕೆ ಹೋಗಿದ್ದೆ. ಈ ಬಗ್ಗೆ ಠಾಣಾ ದಿನಚರಿಯಲ್ಲಿ ನಮೂದಿಸಿ ಹೋಗುತ್ತೇವೆ. ಘಟನಾ ಸ್ಥಳದ ಸುತ್ತಮುತ್ತಲೂ ಮನೆಗಳು ಇವೆ. ಮನೆಯಲ್ಲಿ ಬೇರೆ ಯಾರೂ ಇರಲಿಲ್ಲ. ಮನೆಯಲ್ಲಿ ಬೇರೆಯವರು ವಾಸ ಮಾಡುತ್ತಿದ್ದ ಬಗ್ಗೆ ನಾನು ವಿಚಾರ ಮಾಡಿಲ್ಲ. ನಾನು ದಾಳಿ ಮಾಡಿದಾಗ ಗ್ರಾಹಕರು ಇರಲಿಲ್ಲ. ರಟ್ಟಿನ ಪೆಟ್ಟಿಗೆಯನ್ನು ಪಿ ಎಫ್ ನಲ್ಲಿ ತೋರಿಸಿಕೊಂಡಿಲ್ಲ. ಎಲ್ಲಾ ಪೌಚ್ ಗಳಲ್ಲಿ ರಾಸಾಯನಿಕ ಪರೀಕ್ಷೆಗೆ ತೆಗೆದುಕೊಂಡಿಲ್ಲ. ಪೌಚ್ ಗಳ ಬ್ಯಾಚ್ ಮತ್ತು ನಂಬರ್ ನಮೂದು ಮಾಡಿಲ್ಲ. ನಮ್ಮ ಇಲಾಖೆಯಲ್ಲಿ ಸಾಕಷ್ಟು ಪೌಚ್ ಗಳು ಇರುತ್ತವೆಂದರೆ ಸುಳ್ಳು. ಚಾಸಾ-4 ರಿಂದ 6 ರವರು ನಮ್ಮ ಸಿಬ್ಬಂದಿ ಎಂದರೆ ನಿಜ. ಮುದ್ದೆ ಮಾಲುಗಳಿಗೂ ಮತ್ತು ಆರೋಪಿಗೂ ಯಾವುದೇ ಸಂಬಂದವಿಲ್ಲ ಎಂದರೆ ಸುಳ್ಳು. ನಾನು ಯಾವುದೇ ಸ್ಥಳಕ್ಕೆ ಹೋಗಿಲ್ಲ ಎಂದರೆ ಸರಿಯಲ್ಲ. ಮಹಜರ್ ಮಾಡಿಲ್ಲ ಎಂದರೆ ಸುಳ್ಳು. ಮಹಜರನ್ನು ಠಾಣೆಯಲ್ಲಿ ಸೃಷ್ಟಿ ಮಾಡಿದ್ದೇನೆ ಎಂದರೆ ಸುಳ್ಳು. ಮಾರನೇ ದಿನ ಪ್ರ. ವ. ವ ಮಾಡಿದ್ದೇನೆಂದರೆ ನಿಜ. ಒಂದು ದಿನ ತಡವಾದ ಬಗ್ಗೆ ಕಾರಣ ಎಂದರೆ ರಾತ್ರಿಯಾಗಿರುತ್ತದೆ ಎಂದು ನುಡಿಯುತ್ತಾರೆ. ಎಫ್ ಎಸ್ ಎಲ್ ಗಾಗಿ ಸೀಲು ಮಾಡಿದೆ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸುಳ್ಳು. ಮುದ್ದೆ ಮಾಲುಗಳ ಮೇಲೆ ಯಾವುದೇ ಸಹಿ ಮಾಡಿಲ್ಲ ಎಂದರೆ ಸುಳ್ಳು. ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**<u>ಮರುವಿಚಾರಣೆಃ ಇಲ್ಲ.</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಗಣಕೀಕರಣ ಮಾಡಲಾಯಿತು)**Na**

ಓ.ಹೇ.ಕೇ.ಸ.ಒ

**(ವೆಂಕಟೇಶಪ್ಪ. ವಿ)**
**ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆ.ಎಂ.ಎಫ್.ಸಿ.,ಚನ್ನಪಟ್ಟಣ.**